# ಕೂಸಿನ ಕಂಡೀರಾ ಮುಖ್ಯಪ್ರಾಣನ ಕಂಡೀರಾ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings mentioned without highlights are as per Ref. 1. The lyrics in Ref. 2 are similar to Ref. 1 except few wordings which are given in yellow highlights. The wordings as per Ref. 3 are slightly different and are given separately in green highlights.
5. **Note:** Singer has followed lyrics as in Ref. 2.
6. **Note:** The Ankita are different in these books. We have considered book in Ref.1 as standard and taken that Ankita for listing.

ರಾಗ: ನಾದ ನಾಮ ಕ್ರಿಯೆ ತಾಳ: ಆದಿ

| | |
|---|---|
| ಕೂಸನು (ಕೂಸಿನ) ಕಂಡೀರಾ | ಕೂಸಿನ ಕಂಡೀರ್ಯಾ |
| ಮುಖ್ಯಪ್ರಾಣನ ಕಂಡೀರಾ ‖ ಪ ‖ | ಗುರು ಮುಖ್ಯಪ್ರಾಣನ ಕಂಡೀರ್ಯಾ |
| ಬಾಲನ ಕಂಡೀರಾ ಬಲವಂತನ ಕಂಡೀರಾ ‖ ಅಪ ‖ | ಬಾಲನ ಕಂಡೀರ್ಯಾ ಬಲವಂತನ ಕಂಡೀರ್ಯಾ |
| | |
| ಅಂಜನೆ ಉದರದಲಿ (ಉದರದಿ) ಜನಿಸಿತು ಕೂಸು | ಅಂಜನೆಯುದರದಿ ಪುಟ್ಟಿತು ಕೂಸು |
| ರಾಮರ ಪಾದಕ್ಕೆರಗಿತು ಕೂಸು | ರಾಮನ ಚರಣಕೆ ಎರಗಿತು ಕೂಸು |
| ಸೀತೆಗೆ ಉಂಗುರ ಕೊಟ್ಟಿತು ಕೂಸು | ಸೀತೆಗೆ ಉಂಗುರ ಕೊಟ್ಟಿತು ಕೂಸು |
| ಲಂಕಾಪುರವನು ಸುಟ್ಟಿತು ಕೂಸು ‖ 1 ‖ | ಲಂಕಾಪುರವನೆ ಸುಟ್ಟಿತು ಕೂಸು |
| | |
| ಬಂಡೀ ಅನ್ನವನುಂಡಿತು ಕೂಸು | ಬಂಡೀ ಅನ್ನವನುಂಡಿತು ಕೂಸು |
| ಬಕನ ಪ್ರಾಣವ ಕೊಂಡಿತು ಕೂಸು | ಬಕನ ಪ್ರಾಣವ ಕೊಂಡಿತು ಕೂಸು |
| ವಿಷದ ಲಡ್ಡುಗೆಯ ಮೆದ್ದಿತು ಕೂಸು | ವಿಷದ ಲಡ್ಡುಗೆ ಮೆದ್ದಿತು ಕೂಸು |
| ಮಡದಿಗೆ ಪುಷ್ಪವ ಕೊಟ್ಟಿತು ಕೂಸು ‖ 2 ‖ | ಮಡದಿಗೆ ಪುಷ್ಪವ ಕೊಟ್ಟಿತು ಕೂಸು |
| | |
| ಮಾಯಾವಾದಿಗಳ (ಮಾಯವೆಲ್ಲವ) ಗೆದ್ದಿತು ಕೂಸು | ಮಾಯಾವಾದಿಗಳ ಗೆದ್ದಿತು ಕೂಸು |
| ಮಧ್ವ ಮತವನುದ್ಧರಿಸಿತು ಕೂಸು | ದ್ವೈತ ಮತವನುದ್ಧರಿಸಿತು ಕೂಸು |
| ಮುದ್ದು ಶ್ರೀ ಪುರಂದರ ವಿಠಲನ ದಯದಿಂದ | ಮಧ್ವರಾಯರೆಂಬ ಪೆಸರಿನ ಕೂಸು |
| ಉಡುಪಿಯಲ್ಲಿ ಬಂದು ನಿಂತಿತು ಕೂಸು ‖ 3 ‖ | ಪುರಂದರ ವಿಠ್ಠಲನ ಪ್ರೇಮದ ಕೂಸು |

(ಪುರಂದರ ವಿಠಲನ ದಯದಿಂದ ಕೂಸು
ಸುಮ್ಮನೆ ಉಡುಪಿಲಿ ನಿಂತಿತು ಕೂಸು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹನುಮ–ಭೀಮ–ಮಧ್ವರೆಂಬ ಅವತಾರತ್ರಯವನ್ನು ಹೇಳುವ ಪದ. ಮೊದಲನೆಯ ನುಡಿ ಹನುಮಂತನ ಚರಿತ್ರೆಯನ್ನೂ, ಎರಡನೆಯ ನುಡಿ ಭೀಮನ ವಿಚಾರವನ್ನೂ, ಮೂರನೆಯದು ಮಧ್ವಾಚಾರ್ಯರ ಸಾಧನೆಯನ್ನೂ ತಿಳಿಸುತ್ತವೆ.

**ಮುಖ್ಯಪ್ರಾಣ** – ಹನುಮಂತ.

**ಮಡದಿಗೆ ಪುಷ್ಪವ** – ಭೀಮನು ದ್ರೌಪದಿಗೆ ಸೌಗಂಧಿಕಪುಷ್ಪವನ್ನು ತಂದುಕೊಟ್ಟ ಕಥೆ.

**ಮಾಯವೆಲ್ಲ** – ಮಾಯಾವಾದವೇ ಮೊದಲಾದ ಇಪ್ಪತ್ತೊಂದು ವಾದಗಳನ್ನೆಲ್ಲ.

**ಉಡುಪಿಲಿ ನಿಂತಿತು** – ಕೃಷ್ಣನ ಗರ್ಭಗುಡಿಯ ಹೊರಗೆ, ಹನುಮಂತನ ಸನ್ನಿಧಿಯಿದೆ; ಅಲ್ಲಿ ಅಂಜಲಿಬದ್ಧ ಮುದ್ರೆಯಲ್ಲಿ ಸ್ಥಾನಕ ಭಂಗಿಯಲ್ಲಿರುವ ಮೂರ್ತಿ.

**Classification:** Keerthane
**Ankita:** sri purandara vittala
**Location:** Udupi, Karnataka State
**Category:** Hanuma Stuti
**Sub-Category:** hanuma, bhima, madhva, rama, sita, balavanta, koosu, anna, visha, asura, pushpa, maya, dwaita, madhva, madhwacharya, prema,
**Pravachana:** NA
**Explanation:** NA